ಇಷ್ಟಿಷ್ಟೆಂದು ಹಂಚಿ ಮಕ್ಕಳ ಉತ್ಸಾಹದ ಕೆಲಸವನ್ನು ನೋಡಿ ಖುಷಿ ಪಡುವ ಸಂತನ ಮನಸ್ಸು ಅವರದು. ಚೆನ್ನೂರಿನ ಶಾಲಾ ಆವರಣ ಆ ಊರಿನ ಉದ್ಯಾನವನದಂತೆ ಇತ್ತು. ಪ್ರತಿ ಹಬ್ಬದಲ್ಲಿ ಹಬ್ಬಕ್ಕೆ ಸಂಬಂಧಿಸಿದ ಕತೆ,ಹಾಡು ಸಂಗ್ರಹಿಸಿ ಮಕ್ಕಳಿಗೆ ತಲುಪಿಸುವುದು ಸಾಮಾನ್ಯವಾಗಿತ್ತು. ಶಿವರಾತ್ರಿ ಜಾಗರಣೆ ದಿನ ಮೇಷ್ಟ್ರು ವಿದ್ಯಾರ್ಥಿಗಳಿಗೆ ಹರಿಕತೆ ಹೇಳುತ್ತಿದ್ದರೆ ಕತೆ ಹೇಳುವ ಧಾಟಿಗೆ ಊರಿನ ಕೆಲ ಜನರು ನಿದ್ದೆಯನ್ನೂ ಲೆಕ್ಕಿಸದೆ ಮೇಷ್ಟ್ರ ಮನೆ ಮುಂದೆ ಬಂದು ಸೇರುತ್ತಿದ್ದರು. ಮಕ್ಕಳಿಂದ ಹಲವು ಬಗೆಯ ಸಾಂಸ್ಕೃತಿಕ ಕಾರ್ಯಕ್ರಮ. ಬೆಳಗಿನ ಜಾವ ಎಲ್ಲರಿಗು ಆಂಧ್ರ ಮಾದರಿಯ ಚಿತ್ರಾನ್ನವನ್ನು ಪುಷ್ಪಕ್ಕ ಕೊಡುತ್ತಿದ್ದರು. ಚೆನ್ನೂರಿನಲ್ಲಿ ಮೇಷ್ಟ್ರದ್ದೆ ಕೊನೆ ಮನೆ. ಆಟದ ನೆವದಲ್ಲಿ ಸೀತಾಳ ತಂಡದವರು ಆಗಾಗ ಮೇಷ್ಟ್ರ ಮನೆಗೆ ಹೋಗಿ ತಿಂಡಿ ತಿನಿಸುಗಳನ್ನು ತಿನ್ನುತ್ತಿದ್ದರು.

ಸೀತಾಳ ಅಮ್ಮ ಕೂಡ ಪುಷ್ಪಕ್ಕನಿಗೆ ಅಣಬೆ, ಕೆಸುವಿನ ಸೊಪ್ಪು, ಕಳಲೆ, ಹಲಸು ಗುಜ್ಜಿನ ಪಲ್ಯ, ಕಡಬು, ಕೋಳಿಸಾರು ಇನ್ನು ಮುಂತಾದ ಮಲೆನಾಡಿನ ವಿಶೇಷಗಳನ್ನು ಪರಿಚಯಿಸಿದ್ದರು. ಮೇಷ್ಟ್ರ ಮನೇಲಿ ನಾಯಿ, ಬೆಕ್ಕುಗಳನ್ನು ಸಾಕಿದ್ದರು. ಅವುಗಳ ಜೊತೆ ಕೋಳಿ ಸಾಕ ಬೇಕೆನ್ನುವ ಯೋಚನೆ ಬಂದು ಒಮ್ಮೆ ಆಟದ ಮೈದಾನದಲ್ಲಿ ಮಕ್ಕಳನ್ನು ಕುರಿತು 'ಯಾರ ಮನೇಲಿ ಕೋಳಿ ಸಾಕಿದಿರಿ, ಅವರುಗಳು ಎರಡೆರಡು ಕೋಳಿಮರಿ ತನ್ನಿ. ಹಣ ಕೊಡ್ತೀನಿ'ಎಂದು ಮೇಷ್ಟ್ರು ಹೇಳಿಯೇ ಬಿಟ್ರು. ಅಪ್ಪ ಅಮ್ಮನ ಹತ್ತಿರ ಕೋಳಿ ಮರಿ ಕೇಳಿದ್ರೆ ಅವರುಗಳು ಮೇಷ್ಟ್ರು ಬಗ್ಗೆ ಲಘುವಾಗಿ ತಿಳಿಯುತ್ತಾರೆಂದು ಯೋಚಿಸಿದ ಸೀತಾ ಅಕ್ಕನ ಅನುಮತಿ ಪಡೆದು ಎರಡು ಕೋಳಿ ಪಿಳ್ಳೆಗಳನ್ನು ಮೇಷ್ಟ್ರಮನೆಗೆ ತಲುಪಿಸಿ ಬಿಟ್ಟಳು. ಮೇಷ್ಟ್ರಿಂದ ಹಣ ಪಡೆಯಬಾರದೆಂದು, ಅವರ ಕರೆಗೆ ಓಗೊಡದೆ ತಪ್ಪಿಸಿಕೊಂಡು ಬಂದು ಖುಷಿಯಲ್ಲಿದ್ದಳು. ಮರು ದಿನ ಆದ ಕತೆಯೆ ಬೇರೆ. ಸೀತಾಳಂತೆ ಆರನೆಯ ತರಗತಿಯಲ್ಲಿ ಓದುತ್ತಿದ್ದು,ಗಣಿತ ವಿಷಯದ ಲೆಕ್ಕದಲ್ಲಿ ಮೇಷ್ಟ್ರಿಂದ ಚೆನ್ನಾಗಿ ಪೆಟ್ಟು ತಿಂದು ರೋಸಿ ಹೋಗಿದ್ದ ಕಾರಣಕ್ಕೋ ಏನೋ ರವಿ, ಕಿರಣ ಎನ್ನುವ ಹುಡುಗರು ಮೇಷ್ಟ್ರು ವಿರುದ್ಧ ಎಂದಿನಿಂದಲೊ ಹೊಂಚು ಹಾಕಿದ್ದವರಂತೆ ಪಕ್ಕದೂರಿನ ರಾಜೇಗೌಡ್ರಿಗೆ 'ವಿದ್ಯಾರ್ಥಿಗಳು ಮೇಷ್ಟ್ರಿಗೆ ಕೋಳಿ ಮರಿ ತಂದು ಕೊಡಬೇಕಂತೆ' ಎನ್ನುವ ಸುದ್ದಿ ಮುಟ್ಟಿಸಿದರು.

ಪಕ್ಕದೂರಿನ ರಾಜೇಗೌಡ್ರು ಮರು ದಿನ ಚೆನ್ನೂರಿನ ಮಿಡಲ್ ಸ್ಕೂಲಿನ ಆರನೆಯ ತರಗತಿ ಕೋಣೆಗೆ ಒಮ್ಮೆಲೆ ನುಗ್ಗಿ ಬಂದು 'ಮೇಷ್ಟ್ರಿಗೆ ಕೋಳಿಮರಿ ತಂದು ಕೊಟ್ಟ ಹುಡುಗ ಹುಡುಗಿಯರು ನಿಂತುಕೊಳ್ಳಿ'ಎಂದು ಏರು ದನಿಯಲ್ಲಿ ಅಬ್ಬರಿಸಿದರು. ಗಾಬರಿಗೊಂಡ ಸೀತಾ, ಶಕು ನಿಧಾನಕ್ಕೆ ಎದ್ದು ನಿಂತರು. ತಕ್ಷಣವೆ ಗೌಡ್ರು 'ಮೇಷ್ಟ್ರಿಗೆ ಸಂಬಳ ಬರಲ್ವ' ಎಂದು ಸೀತಾ, ಶಕುಗೆ ನಾಕು ನಾಕು ಅಲ್ಲೇ ಬಾರಿಸಿದರು. ನಿಮ್ಮ ಅಪ್ಪಂದಿರನ್ನು ವಿಚಾರಿಸುತ್ತೇನೆ ಎಂದು ದಬಾಯಿಸಿದರು. ಮೇಷ್ಟ್ರಿಗೆ ಏನಾದರು ಅನಾಹುತ ಆಗುತ್ತದೆಂದು ತಿಳಿದ ಸೀತಾ ಬಿಕ್ಕಳಿಸಿ ಅತ್ತಾಗ ಮತ್ತೆ ನಾಕು ಬಿಗಿದರು. ತರಗತಿಯ ಈ ಘಟನೆ ಸಂಜೆ ಹೊತ್ತಿಗೆ ಊರೆಲ್ಲ ಹರಡಿ ಸೀತಾ,ಶಕು ವಿಲನ್ಗಳಾಗಿ ಹೋಗಿದ್ದರು. ಸಂಜೆ ಶಾಲೆಗೆ ಬೇಗ ಹಾಕಿ ಬೇಗದ ಕೀ ಕೊಡಲು ಮೇಷ್ಟ್ರ ಮನೆಗೆ ಹೊರಟರೆ ಸೀತಾ, ಶಕುರನ್ನು ಊರಲ್ಲಿ ಹಿರಿಯರೆನಿಸಿಕೊಳ್ಳುತ್ತಿದ್ದ ಹಿರಿಯರಿಬ್ಬರು ರಸ್ತೆ ಮಧ್ಯ ನಿಲ್ಲಿಸಿಕೊಂಡು 'ನೀವು ಶಾಲೆಗೆ ಓದೋಕೆ ಹೋಗೋರೊ, ಕೋಳಿ ಕದ್ದು ಮೇಷ್ಟ್ರಿಗೆ ಮಾರೋಕೆ ಹೋಗೋರೊ, ನಿನ್ನ ಅಪ್ಪನ ಹತ್ತಿರ ಬರುತ್ತೇವೆ ನಡಿ' ಎಂದು ಸೀತಾಳನ್ನು ಗದರಿಸಿ ಹೋದರು.

ಅಪ್ಪನಿಗೆ ವಿಷಯ ಗೊತ್ತಾಗುತ್ತೆ ಎಂದು ಹೆದರಿ ಶಾಲೆಯಿಂದ ಬಂದವಳೆ ಪುಸ್ತಕದ ಚೀಲವನ್ನು ಹಿಂಬಾಗಿಲಿನಿಂದ ಮನೆಯೊಳಗಿಟ್ಟು ಬಂದು ಹಿತ್ತಲಲ್ಲಿ ಇರುವ ಹಲಸಿನ ಮರವೇರಿ ಕುಳಿತಳು. ಅಲ್ಲಿಂದಲೆ ಮನೆಯವರ ಮಾತುಗಳನ್ನು ಆಲಿಸುತ್ತಲೇ ಇದ್ದಳು. ಕತ್ತಲಾಗಿ ಏಳು ಗಂಟೆಯಾದರು ಮಗಳು ಮನೆಗೆ ಬರದಿದ್ದಾಗ ಮನೆಯವರೆಲ್ಲ ಗಾಬರಿಗೊಂಡರು. 'ಮಗಳು ಮೇಷ್ಟ್ರಿಗೆ ಕೊಟ್ಟ ಕೋಳಿಮರಿ ವಿಷಯ ರಾಜೇಗೌಡ್ರಿಂದ ಮೊದಲೆ ಸೀತಾಳ ಅಪ್ಪ ಅಮ್ಮನಿಗೆ ತಿಳಿದಿತ್ತು.' ಇಬ್ಬರೂ ಆ ವಿಷಯವನ್ನು ಅಷ್ಟೇನೂ ಗಂಭೀರವಾಗಿ ತೆಗೆದು ಕೊಂಡಿರಲಿಲ್ಲ. ಮಗಳು ಮನೆಗೆ ಬರದೆ ಚಿಂತಿತರಾಗಿ ಅವಳ ಅಣ್ಣ, ಅಕ್ಕರನ್ನು ಆಕೆಯ ಗೆಳತಿಯರ ಮನೆಗೆ ಹುಡುಕಲು ಕಳಿಸಿದರು. ಅಪ್ಪ ದೂರದೂರಿನ ಸೀತಾಳ ಗೆಳತಿ ಆಶಾಳ ಮನೆಗೆ ಹೋಗಲು ಬ್ಯಾಟರಿ ಹುಡುಕುತ್ತಿದ್ದರು. ಮರವೇರಿ ಕುಳಿತ್ತಿದ್ದ ಸೀತಾಳಿಗೆ ಕತ್ತಲಾಗುತ್ತಿದ್ದಂತೆ ದೆವ್ವ, ಭೂತಗಳ ಕತೆ ನೆನಪಾಗಿ ಹೆದರಿ ನಡುಗುತ್ತಲೇ ಮರದಿಂದ ಕೆಳಗಿಳಿಯುವಾಗ ಬೇಲಿಯ ಮೇಲೆ ಕಾಲಿಟ್ಟೊಡನೆ ದಿಡ್ ಎಂದು ಬೇಲಿ ಕುಸಿದು ಬಿತ್ತು. ಆ ಶಬ್ದಕ್ಕೆ ಗಾಬರಿಗೊಂಡ ಆಕೆಯ ಅಪ್ಪ ಅಮ್ಮ ಹಿತ್ತಲಿಗೆ ಓಡಿ ಬಂದರು. ಸೀತಾ ಅಳುತ್ತ, ನಡುಗುತ್ತ ನಿಂತಿದ್ದಾಳೆ. ಮಗಳನ್ನು ತಬ್ಬಿಕೊಂಡು ಸೀತಾಳ ಅಮ್ಮ 'ನಿನಗೆ ಬೈಯಲ್ಲ ಮಗಳೆ, ಎರಡು ಕೋಳಿ ಮರಿಗೆ, ಅದೂ ನಿನ್ನ ಮೇಷ್ಟ್ರಿಗೆ ಕೊಟ್ಟಿದ್ದಕ್ಕೆ ಹೊಡೀತೀವ? ನಮ್ಮನೆ ಕೋಳಿ, ನಿನ್ನ ಮೇಷ್ಟ್ರಿಗೆ ಕೊಟ್ಟಿದ್ದಕ್ಕೆ ಅವರ್ಯಾರು ಹೊಡಿಯೋಕೆ' ಎಂದು ಸಮಾಧಾನ ಪಡಿಸಿ ಮುದ್ದಿಸಿದಳು. 'ಅಪ್ಪ ಹೊಡಿಬೇಡಿ' ಎಂದು ಬಿಕ್ಕಳಿಸುತ್ತಿದ್ದ ಮಗಳ ತಲೆಯನ್ನು ಸವರಿ, ಆಕೆಯನ್ನು ಅಪ್ಪಿಕೊಂಡ ಅಪ್ಪ ಮೇಷ್ಟ್ರ ಮನೆಗೆ ಕರೆದುಕೊಂಡು ಹೋದರು. ಶಾಲೆಯಲ್ಲಾದ ಮುಜುಗರದ ಘಟನೆಗೆ ಮೇಷ್ಟ್ರು ದಂಪತಿಗಳಿಗೆ ಸಾಂತ್ವನ ಹೇಳಿ ವಾಪಾಸಾದರು. ಶಾಲಾ ಕಾರ್ಯಕ್ರಮ ವೊಂದಕ್ಕೆ ರಾಜೇಗೌಡರನ್ನು ಅತಿಥಿಯಾಗಿ ಆಹ್ವಾನಿಸದಿದ್ದುದೇ ಈ ಘಟನೆಯ ವಿಕೋಪಕ್ಕೆ ಕಾರಣವಾಗಿರಬಹುದು.

ನಿನ್ನೆ ರಾತ್ರಿ ಮೇಷ್ಟ್ರನ್ನ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದ ಚೆನ್ನೂರಿನ ಗೌಡ್ರ ಕಾರು ಬೆಳಿಗ್ಗೆ ಊರು ತಲುಪಿದಾಗ ಜನ ಗುಂಪಾಗಿ ಮುತ್ತಿಕೊಂಡರು. ಮೇಷ್ಟ್ರನ್ನು ಕೋಲಾರದ ಆಸ್ಪತ್ರೆಗೆ ಸೇರಿಸುತ್ತಾರಂತೆ. ಅಲ್ಲಿಯೆ ಅವರ ಕಾಲಿನ ಆಪರೇಷನ್ ಮಾಡಿಸಬಹುದಂತೆ. ಅವರನ್ನು ಕುಟುಂಬದವರೆ ನೋಡಿಕೊಳ್ಳುತ್ತಾರಂತೆ ಎನ್ನುವ ಸುದ್ದಿಯನ್ನು ಗೌಡ್ರು ಊರಿಗೆ ತಲುಪಿಸಿದರು. ಬೆಳಿಗ್ಗೆ ಎದ್ದೊಡನೆ ವಿಷಯ ತಿಳಿದ ಸೀತಾಳಿಗೆ ಏನೊ ಬೇಸರ, ಬೇಸಿಗೆ ರಜೆ ಇದ್ದ ಕಾರಣ ಅಕ್ಕ, ಅಣ್ಣನ ಜೊತೆ ಅಜ್ಜಿ ಮನೆಗೆ ಹೊರಟು ಬಿಟ್ಟಳು. ಬೇಸಿಗೆ ರಜೆ ಇರುವಾಗಲೆ ಮೇಷ್ಟ್ರು ಕೋಲಾರದ ಮಾಲೂರಿಗೆ ವರ್ಗಾವಣೆ ಪಡೆದು, ಚೆನ್ನೂರಿನ ಶಾಲೆಯಿಂದ ಬಿಡುಗಡೆ ಹೊಂದಿ, ಊರಿನವರಿಗೆಲ್ಲ ವರ್ಗಾವಣೆಯಾದ ವಿಷಯ ತಿಳಿಸಿ ಮನೆ ಖಾಲಿ ಮಾಡಿಕೊಂಡು ಹೋಗಿದ್ದರು. ರಜೆ ಮುಗಿಸಿ ಊರಿಗೆ ಬಂದ ಗೆಳತಿಯರಿಗೆಲ್ಲ ಮೇಷ್ಟ್ರ ವರ್ಗಾವಣೆ ದೊಡ್ಡ ಆಘಾತ ತಂದಿತ್ತು. ಮೇಷ್ಟ್ರು ಕೋಣೆಯಲ್ಲಿ ವಸ್ತುಗಳನ್ನು ಬಿಟ್ಟು ಹೋಗಿದ್ದಾರೆಯೆ? ಬಿಟ್ಟು ಹೋಗಿದ್ದರೆ ಮತ್ತೆ ಊರಿಗೆ ಬರುವುದು ಗ್ಯಾರಂಟಿ ಎಂದು ಭಾವಿಸಿದ ಮಕ್ಕಳು ಅವರಿದ್ದ ಮನೆಯ ಕಿಟಕಿಯಿಂದ ಇಣುಕಿ ನಿರಾಶರಾದರು.. ಗೆಳತಿಯರೆಲ್ಲ ಮರದ ಕೆಳಗೆ ಕುಳಿತು ಮೇಷ್ಟ್ರು ಪುಷ್ಪಕ್ಕನ ಗುಣಗಾನ ಮಾಡಿ ಕಣ್ಣೀರಿಟ್ಟರು. ಚೆನ್ನೂರಿನ ಶಾಲೆಯಲ್ಲಿ ಮೇಷ್ಟ್ರಿಗೆ ಬೀಳ್ಕೊಡುಗೆ ಸಮಾರಂಭ ಇಟ್ಟುಕೊಂಡಾಗ ಗೆಳತಿಯರೆಲ್ಲ ನೆಂಟರಿಷ್ಟರು ಕೊಟ್ಟ ಹಣ ಒಟ್ಟಾಕಿ ವಿವೇಕಾನಂದರ ದೊಡ್ಡ ವಿಗ್ರಹ ಕೊಡುವ ತೀರ್ಮಾನ ಮಾಡಿ, ಧನ್ಯತಾ ಭಾವದೊಂದಿಗೆ ಅವರವರ ಮನೆಗೆ ತೆರಳಿದ್ದು ಸೀತಾಳ ಹೃದಯ ಪಟಲದಿಂದ ಮರೆಯಾಗದ ಸಂಗತಿ.

ಸೀತಾ ಓದು ಮುಗಿಸಿ ಕೋಲಾರ ಜಿಲ್ಲೆಯಲ್ಲೇ ಉಪನ್ಯಾಸಕಿಯಾದಳು. ಬಹಳ ಕಾಲ ಸೀತಾ ಕೋಲಾರದಲ್ಲಿದ್ದರೂ ವೆಂಕಟೇಶ್ವರ ಮೇಷ್ಟ್ರ ಬಗ್ಗೆ ಮಾಹಿತಿಯೇ ಸಿಕ್ಕಿರಲಿಲ್ಲ. ಕೋಲಾರದ ಪತ್ರಿಕೆಗಳಲ್ಲಿ ಮಾಲೂರಿನ ಸುದ್ದಿ ಇದ್ದರೆ ಗಮನವಿಟ್ಟು ನೋಡುತ್ತಿದ್ದ ಸೀತಾಳಿಗೆ ಒಮ್ಮೆ ನಿರೀಕ್ಷೆಗೂ ಮೀರಿದ ಜಾಹಿರಾತೊಂದು ಕಾಣಿಸಿತು. 'ನಿವೃತ್ತರಾಗುತ್ತಿರುವ ಶ್ರೀ ವೆಂಕಟೇಶ್ವರ ಮೇಷ್ಟ್ರಿಗೆ ಬೀಳ್ಕೊಡುಗೆ ಮತ್ತು ಸನ್ಮಾನ ಸಮಾರಂಭ'. ಜೊತೆಗೆ ಮೇಷ್ಟ್ರು ದಂಪತಿಗಳ ಫೋಟೋ ಕೂಡ ಇತ್ತು. ಮರು ದಿನ ಕಾಲೇಜಿಗೆ ರಜೆ ಹಾಕಿದ ಸೀತಾ ಬಸ್ಸಿನಲ್ಲಿ ಪ್ರಯಾಣಿಸಿ ಹೊರಲಾರದ ಹೊರೆ ಹೊತ್ತು ವೆಂಕಟೇಶ್ವರ ಮೇಷ್ಟ್ರು ಸೇವೆ ಸಲ್ಲಿಸುತ್ತಿದ್ದ ಮಾಲೂರಿನ ಶಾಲಾ ಆವರಣ ಪ್ರವೇಶಿಸುತ್ತಿದ್ದಂತೆ ಆಯೋಜಕರು ಸಭೆಯ ಮುಂಭಾಗಕ್ಕೆ ಆಹ್ವಾನಿಸಿ ಕುಳಿತುಕೊಳ್ಳಲು ಹೇಳಿದರು. ಅಲ್ಲಿರುವವರಿಗೆ ಸೀತಾಳ ಪರಿಚಯವಿಲ್ಲ. ಮೇಷ್ಟ್ರು ಪುಷ್ಪಕ್ಕ ವೇದಿಕೆಯಿಂದಲೇ ಯಾರಿರಬಹುದೆಂದು ದಂಗಾಗಿ ಆಗಾಗ ನೋಡುತ್ತಲೇ ಇದ್ದರು. ಮೇಷ್ಟ್ರಿಗೆ ಸಾರ್ವಜನಿಕರು ಶಾಲೆಯವರು ಒಟ್ಟಾಗಿ ಸನ್ಮಾನ ಸಮಾರಂಭ ಇಟ್ಟುಕೊಂಡಿದ್ದರು. ಸಮಾರಂಭದ ಆರಂಭಿಕ ಹಂತ ಮುಗಿಯುತ್ತಿದ್ದಂತೆ ಸನ್ಮಾನ ಕಾರ್ಯಕ್ರಮ ಪ್ರಾರಂಭವಾಯಿತು. ಮೊದಲ ಅವಕಾಶ ಸೀತಾಳಿಗೆ ಕೊಡುತ್ತಿದ್ದಂತೆ, ಕುಳಿತಲ್ಲೇ ಪ್ಯಾಕಿಂಗ್ ತೆಗೆದು ಹಾಕಿ ವೇದಿಕೆಗೆ ಬಂದು ವಿವೇಕಾನಂದರ ದೊಡ್ಡ ವಿಗ್ರಹವನ್ನು ಮೇಷ್ಟ್ರಿಗೆ ಅರ್ಪಿಸಿ, ನಮಸ್ಕರಿಸಿ ತಾನು ಚೆನ್ನೂರಿನ ಸೀತಾ. ನಿಮ್ಮ ವಿದ್ಯಾರ್ಥಿನಿ ಎನ್ನುತ್ತಲೇ ಮೇಷ್ಟ್ರು ಸೀತಾಳ ಕೈಹಿಡಿದು ಗದ್ಗದಿತರಾದರು. ಮೇಷ್ಟ್ರ ಕುರಿತು ಮಾತಾಡಲು ಸೂಚಿಸಿದಾಗ ಸೀತಾ ಇಂಥ ಮೇಷ್ಟ್ರು ಪ್ರತಿ ಹಳ್ಳಿಗಳಲ್ಲಿ ಒಬ್ಬರಿದ್ದರೆ!.. ಎನ್ನುವಾಗಲೇ ದುಃಖ ಉಮ್ಮಳಿಸಿ ಮಾತು ನಿಲ್ಲಿಸಿದಳು. ■